# ಗೊಡಚಿನಮಲ್ಕಿ ಜಲಪಾತ



ಅಪರೂಪಕ್ಕೆ ಬೆಳಗಾವಿಗೆ ಭೇಟಿ ನೀಡಿದ ನಾವು ಗೂಗಲ್‌ನಲ್ಲಿ ಕಂಡ ಹೆಸರನ್ನು ಹುಡುಕಿಕೊಂಡು ದಾರಿಯಲ್ಲಿ ಸಿಕ್ಕ ಕೆಲವರಿಂದ ಮಾಹಿತಿ ಪಡೆದುಕೊಂಡು ಹೋಗುತ್ತಿರುವಾಗ ರಸ್ತೆ ಬದಿಯಲ್ಲಿ ನಿಂತಿದ್ದ ಒಂದೆರಡು ವಾಹನಗಳನ್ನು ನೋಡಿ ವಾಹನ ನಿಲ್ಲಿಸಿದರೆ ಭೋರ್ಗರೆಯುವ ಜಲಪಾತದ ಶಬ್ದ ಕೇಳಿತು. ಸ್ವಲ್ಪ ಕೆಳಗಿಳಿದು ನೋಡಿದರೆ ನಯನಮನೋಹರವಾದ ದೃಶ್ಯ. ಅದುವೇ ಗೋಕಾಕ ತಾಲೂಕಿನಲ್ಲಿರುವ ಗೊಡಚಿನಮಲ್ಕಿ ಜಲಪಾತ. ಇಂತಹ ಸುಂದರವಾದ ಜಲಪಾತ ಎಲೆಮರೆಯ ಕಾಯಿ ತರಹ ಇರಬೇಕಾದರೆ ಅದಕ್ಕೆ ಕಾರಣ ಕರ್ನಾಟಕ ರಾಜ್ಯದ ಪ್ರವಾಸೋದ್ಯಮ ಇಲಾಖೆಯ ನಿರ್ಲಿಪ್ತ ಧೋರಣೆ ಎನ್ನಬಹುದು. ದಾರಿಯಲ್ಲಿ ಒಂದು ಸೂಚನಾ ಫಲಕವಿಲ್ಲ ಸ್ಥಳದ ಬಗ್ಗೆ ಮಾಹಿತಿಯು ಇಲ್ಲ.ಅಷ್ಟು ಕಷ್ಟಪಟ್ಟು ಹುಡುಕಿಕೊಂಡು ಹೋದ ಆಯಾಸವೆಲ್ಲ ಆ ಸುಂದರ ದೃಶ್ಯ ಕಂಡು ಒಂದೇ ನಿಮಿಷದಲ್ಲಿ ಮಾಯವಾಯ್ತು .ಅಲ್ಲಿ ಒಂದು ಬೀಡಿ ಸಿಗರೇಟು ಮಾರುತ್ತಿದ್ದ ಅಜ್ಜಿಯೊಬ್ಬಳು ಪಾರ್ಕಿಂಗ್ ಟಿಕೆಟ್ ಹರಿದುಕೊಟ್ಟಳು. ನಿಜವಾಗಿಯೂ ನಮ್ಮ ರಾಜ್ಯದಲ್ಲಿ ಪ್ರವಾಸೋದ್ಯಮದ ದುರವಸ್ಥೆಯನ್ನು ಕಣ್ಣಾರೆ ಕಾಣುವ ಅವಕಾಶ ನಮಗಾಯಿತು. ಜಲಪಾತಕ್ಕೆ ಬರುವ ಪ್ರವಾಸಿಗರಿಗೆ ಜಾಗ್ರತೆ ಹೇಳುವುದಿರಲಿ ಏನಾದರು ಅವಘಡವಾದರೆ ಯಾವ ಸಹಾಯವನ್ನು ನಿರೀಕ್ಷಿಸುವಂತಿಲ್ಲ. ಹಂತ ಹಂತವಾಗಿ ನೀರು ಧುಮ್ಮಿಕ್ಕುವ ಆ ದೃಶ್ಯ ನಯಾಗರ ಜಲಪಾತವನ್ನು ನೆನಪಿಸದಿರದು .

–ಮಾಧವ ಉದ್ಯಾವರ, ಮೈಸೂರು

# ಪುರಾತನ ಬಾವಿ!

ವಿಜಯಪುರದ ಶಹಾಪೂರ ಅಗಸಿಯ ಮನೆಯಲ್ಲೊಂದು ಬಾವಿಯಿದೆ. ನೂರು ಅಡಿ ಆಳದ ಈ ಬಾವಿಯಲ್ಲಿ ಇಂದಿಗೂ ನೀರಿದೆ. ಮನೆಯವರು ಈ ನೀರನ್ನು ಪಂಪಿನಿಂದ ಮೇಲಕ್ಕೆತ್ತಿ ಬಳಸುತ್ತಾರೆ. ಹಗ್ಗದಿಂದಲೂ ನೀರನ್ನು ಸೇದಬಹುದಾಗಿದೆ. ನೂರು ವರ್ಷಗಳ ಹಿಂದಿನ ಈ ಆಕರ್ಷಕ ಬಾವಿಯು ಈರೂಬಾಯಮ್ಮ ಜತ್ತಿಯವರ ಮನೆಯೊಳಗಿದೆ.

–ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು





# ಪುರಾತನ ದೀಪ ಸ್ತಂಭ



ಮಂಗಳೂರು ಐತಿಹಾಸಿಕ ನೈಸರ್ಗಿಕ ಬಂದರು ಪ್ರದೇಶ. ಈ ಚಿತ್ರವೂ ಮಂಗಳೂರಿನದ್ದು. ಹಿಂದಿನ ಕಾಲದಲ್ಲಿ ರಾತ್ರಿಯ ಹೊತ್ತು ಸಮುದ್ರದಲ್ಲಿ ಸಂಚರಿಸುತ್ತಿದ್ದ ಹಾಯಿ ಹಡಗುಗಳಿಗೆ ತೀರ ಪ್ರದೇಶದ ಅರಿವು ಮೂಡಿಸುವ ದೀಪಸ್ತಂಭ ಇದಾಗಿತ್ತು. ಬಾವುಟ ಗುಡ್ಡೆ ಎಂಬ ಎತ್ತರದ ಗುಡ್ಡದ ಮೇಲೆ ಇದನ್ನು ಕಟ್ಟಲಾಗಿದೆ. ಇದರ ಮೇಲ್ಭಾಗದಲ್ಲಿ ಕಬ್ಬಿಣದ ದೊಡ್ಡ ಕೊಪ್ಪರಿಗೆ ಇರಿಸಿ, ಅದರಲ್ಲಿ ರಾತ್ರಿಯ ವೇಳೆ ಸೌದೆಯನ್ನು ಸುಡುತ್ತಿದ್ದರಂತೆ. ಆ ಬೆಂಕಿಯ ಜ್ವಾಲೆ ಬಹು ದೂರದವರೆಗೆ ಕಾಣುತ್ತಿತ್ತಂತೆ. ಬ್ರಿಟೀಷರ ಕಾಲದಲ್ಲಿ ದೀಪ ಬೆಳಗಿಸಲು ಬೇರೆ ಉರುವಲು ಬಳಸಿದ ಕಾರಣ ಮತ್ತಷ್ಟು ಪ್ರಾಮುಖ್ಯತೆ ಪಡೆದಿತ್ತು ಈ ಸ್ಥಂಭ. ಆಗ ಅತ್ಯುತ್ತಮ ಸೇವೆ ನೀಡಿ, ಈಗ ಇತಿಹಾಸದ ಮೂಕ ಸಾಕ್ಷಿಯಾಗಿದೆ. ಬಾವುಟ ಗುಡ್ಡೆಯ ಸುತ್ತಮುತ್ತಲೂ ಕಟ್ಟಡಗಳು ಮೇಲೆದ್ದು, ಈ ದೀಪಸ್ತಂಭ ಮೂಲೆಗುಂಪಾಗಿದೆ.

–ರಮೇಶ್ ಬಿ.ಎಂ., ಬೆಂಗಳೂರು

## ನೀವೂ ಬರೆಯಿರಿ

‘ಸುಧಾ’ ವಾರಪತ್ರಿಕೆಯಲ್ಲಿ ಪ್ರಕಟವಾಗುವ ‘ನಿಮ್ಮ ಪುಟ’ ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly